ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಕನ್‌ವೀನ್ಸ್ ಮಾಡುವಂಥ ಪ್ರಯತ್ನ ಮಾಡುತ್ತಿದ್ದೇನೆ. ಅದಾದಮೇಲೆ ತಾವು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮೊದಲು ನನಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಿ. ಅದಾದಮೇಲೆ ವಿರೋಧಪಕ್ಷದ ನಾಯಕರು ಏನು ಪ್ರಸ್ತಾಪ ಮಾಡುತ್ತಾರೋ, ಮಾಡಲಿ. ನಾನು ತಮ್ಮ ಕೊಟಡಿಯಲ್ಲಿ ಬಂದು, ತಮಗೆ ಕನ್‌ವೀನ್ಸ್ ಮಾಡುವ ಪ್ರಯತ್ನ ಮಾಡಿದ್ದೇನೆ. ಇದು ಪ್ರಮುಖವಾದ ಸಂಗತಿ. ಕೆ.ಎನ್.ಟಿ.ಡಿ.ಸಿ.ನವರು ಸುಮಾರು ೫೬,೪೬ ಸ್ಕೇರ್‌ಮೀಟರ್ ಜಾಗವನ್ನು ಬೆಂಗಳೂರು ಸೌತ್, ವರ್ತೂರು ಬಳಿ, ಇಂಟರ್‌ನ್ಯಾಷನಲ್ ಗಾಲ್ಫ್ ಗ್ರೌಂಡ್‌ಗೋಸ್ಕರ ತೆಗೆದುಕೊಂಡಿದ್ದಾರೆ. ಈ ಜಮೀನನ್ನು ಇವತ್ತು ಸೆಂಚುರಿ ಗೆಲಾಕ್ಸಿ ಪ್ರೈವೇಟ್ ಲಿಮಿಟೆಡ್ ಅವರಿಗೆ.....

ಉಪಾಧ್ಯಕ್ಷರು : ಮಾನ್ಯ ವಿಕಾಂತಯ್ಯನವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಹೆಚ್. ವಿಕಾಂತಯ್ಯ : ಹಕ್ಕುಚ್ಯುತಿ ಬಗ್ಗೆ ಒಂದು ಪ್ರಸ್ತಾವನೆ ಕಳುಹಿಸಿದಾಗ, ಅದನ್ನು ಮೊದಲು ತೆಗೆದುಕೊಳ್ಳಬೇಕೋ ಅಥವಾ ನಿಲುವಳಿ ಸೂಚನೆಯನ್ನು ಮೊದಲು ತೆಗೆದುಕೊಳ್ಳಬೇಕೋ?

ಉಪಾಧ್ಯಕ್ಷರು : ಈಗ ಪ್ರಿವಿಲೇಜ್ ಮೋಷನ್ ಬಗ್ಗೆ ತಾವು.....

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೇ ರೀತಿಯ ಅನುಮತಿಯನ್ನು ಕೊಡುವಂಥ ಅವಕಾಶ, ಉಪಾಧ್ಯಕ್ಷರಿಗೆ ಕಾನೂನು ಚೌಕಟ್ಟಿನಲ್ಲಿದೆ. ಇದು ತುಂಬಾ ಗಂಭೀರವಾದ ಸಂಗತಿ, ಅವ್ಯವಹಾರದ ಸಂಗತಿ, ಸೆಂಚುರಿ ಗೆಲಾಕ್ಸಿ ಪ್ರೈವೇಟ್ ಲಿಮಿಟೆಡ್‌ನವರಿಗೆ ವರ್ಗಾವಣೆ ಮಾಡುವಂಥ ಪ್ರಯತ್ನವನ್ನು ಕೆ.ಎಸ್.ಟಿ.ಡಿ.ಸಿ.ನವರು ಮಾಡಿದ್ದಾರೆ. ಮೊನ್ನೆ ಆಗಸ್ಟ್....

ಉಪಾಧ್ಯಕ್ಷರು : ಈಗ ಅವರ ಪ್ರಿವಿಲೇಜ್ ಮೋಷನ್ ಏನಿದೆ ಎಂದು ಅವರನ್ನು ಕರೆದುಬಿಡುತ್ತೇನೆ. ಅವರು ಏನು ಹೇಳುತ್ತಾರೆ ನೋಡಿ, ಅನಂತರ ತಮ್ಮನ್ನು ಕರೆಯುತ್ತೇನೆ....

ಹಕ್ಕು ಭಾಧ್ಯತೆ ಬಗ್ಗೆ ಪ್ರಸ್ತಾಪ

ವಿಷಯ : ಅವಿಶ್ವಾಸ ನಿರ್ಣಯದ ಮೇಲೆ ಉತ್ತರ ಕೊಡುವಾಗ ಮುಖ್ಯಮಂತ್ರಿಗಳು ಕೆಲವು ತಪ್ಪು ಮಾಹಿತಿಗಳನ್ನು ಕೊಟ್ಟಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ನಾನು ತಾರೀಖು ೧೩-೩-೯೧ರಂದು ತಮ್ಮ ಕಾರ್ಯಾಲಯಕ್ಕೆ ಬಹಳ ಮುಖ್ಯವಾಗಿರತಕ್ಕ ಹಕ್ಕುಬಾಧ್ಯತೆ. ಪ್ರಶ್ನೆಯ ನೋಟೀಸನ್ನು ಕೊಟ್ಟಿದ್ದೇನೆ. ಈ ಹಕ್ಕುಬಾಧ್ಯತೆ ಬಹಳ ಮುಖ್ಯವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು, ನಮ್ಮ ಅವಿಶ್ವಾಸ ನಿರ್ಣಯದ ಮೇಲೆ ಉತ್ತರವನ್ನು ಕೊಡುತ್ತಾ ಸದನದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

SRI M. VEERAPPA MOILY: Chief Minister.....

SRI D.B. CHANDRE GOWDA : Privilege cannot wait for the Chief Minister of the Parliamentary Affairs Minister. It has to go according to the

procedure. What can I do? I only submit to the Chair that privilage prededes over all other matters

SRI M.VEERAPPA MOILY : You can raise it. I am not preventing. I am only making a request.

SRI D.B. CHANDRE GOWDA : Madam.

ನಾನು ಈ ಪ್ರಶ್ನೆಯನ್ನು, ಹಕ್ಕುಭಾಧ್ಯತೆಯ ಚ್ಯುತಿಯಾಗಿದೆ ಎಂದು ಪ್ರಸ್ತಾಪ ಮಾಡಿದ್ದೇನೆ. ಬಹಳ ಮುಖ್ಯವಾಗಿ, ಸದನ ನಾವು ಯಾವರೀತಿ ನಡೆಸಬೇಕು, ಸಭಾನಾಯಕರು ಮತ್ತು ಪ್ರತಿಪಕ್ಷದಲ್ಲಿ ಕೆಲಸ ಮಾಡತಕ್ಕ ನಾವು ಸಭೆಯಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವಾಗ ಎಂತಹ ಒಂದು ಇತಿಮಿತಿಯೊಳಗೆ ಕೆಲಸ ಮಾಡಬೇಕು ಎನ್ನುವುದನ್ನು ನಾವೇ ಹಾಕಿಕೊಂಡಿರತಕ್ಕ ನಿಯಮಾವಳಿಗಳಲ್ಲಿ ನಾವು ಬಂಧಿಸಿಕೊಂಡಿದ್ದೇವೆ. ೧೯೦ನೇ ವಿಧಿಯ ಹಕ್ಕುಭಾಧ್ಯತಾ ಪ್ರಶ್ನೆಯನ್ನು ಕಳುಹಿಸುವಾಗ ನಾನು ತಮ್ಮ ಅನುಮತಿಯನ್ನು ಕೇಳಿದ್ದೇನೆ. ಈ ಸದನದ ಹಕ್ಕುಚ್ಯುತಿಯಾಗಿದೆ ಎಂದು ಹೇಳಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇದು ಬಹಳ ಸೂಕ್ಷ್ಮವಾದ ವಿಚಾರಗಳು. ಮಾನ್ಯ ಉಪಾಧ್ಯಕ್ಷಣೆಯವರೇ, ನಾನು ಇಲ್ಲಿ ಕಳುಹಿಸಿರತಕ್ಕಂಥ ಹಕ್ಕುಬಾಧ್ಯತೆಯ ಒಂದು ಸೂಚನೆ ಈ ಸದನವನ್ನು ವಿಲ್‌ಫುಲಿ ತಪ್ಪುದಾರಿಗೆಳೆಯತಕ್ಕ ಪ್ರಯತ್ನವನ್ನು ಯಾರೇ ಮಾಡಿದರೂ ಸಹ ಅದು ಈ ಸದನದ ಹಕ್ಕುಚ್ಯುತಿಯಾಗುತ್ತದೆ. ಒಬ್ಬ ಮಂತ್ರಿಗಳ ಮೇಲೆ ಅವರಿಗೆ ಸಂಬಂಧಪಟ್ಟಹಾಗೆ ಕ್ರಿಮಿನಲ್ ಮೊಕದ್ದಮೆ ಇದೆ ಎಂಬ ಆಪಾದನೆ ಮಾಡಿದ್ದೇನೆ. ಹಾಗೆ ಮಾಡುವಾಗ ನಾನು ಯಾವ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದೇನೆ, ನನ್ನ ಜವಾಬ್ದಾರಿ ಏನು ಎಂಬುದನ್ನು ನಾನು ಬಹಳ ವಿಶೇಷವಾಗಿ ಗಮನಿಸಿ ಈ ಪ್ರಸ್ತಾಪ ಮಾಡಿದ್ದೇನೆ.

ಆದರೆ ದುರ್ದೈವದಿಂದ ಸಭಾನಾಯಕರು ಉತ್ತರ ಕೊಡುತ್ತಾ ನಾನು ಹೇಳಿದಂಥ ಆಪಾದನೆಗೆ ತದ್‌ವಿರುದ್ಧವಾಗಿ ಉತ್ತರ ಕೊಟ್ಟಿದ್ದಾರೆ. ಅದರ ಮೇಲೆ ಮುಖ್ಯವಾಗಿ ಮೂರು ವಿಚಾರಗಳನ್ನು ನಾವು ಇಲ್ಲಿ ಗಮನಿಸಬೇಕು. ಒಂದು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರ ಸರಿಯಾಗಿದ್ದರೆ ನಾನು ಈ ಸದನವನ್ನು ತಪ್ಪುದಾರಿಗೆಳೆದಿದ್ದೇನೆ ಎಂಬ ಅರ್ಥ ಬರುತ್ತದೆ. ನಾನು ಹೇಳಿದ ಆಪಾದನೆಯೇನಾದರೂ ಸರಿಯಾಗಿದ್ದರೆ, ಮುಖ್ಯಮಂತ್ರಿಗಳು ಈ ಸದನವನ್ನು ತಪ್ಪುದಾರಿಗೆಳೆದಿದ್ದಾರೆ ಎಂಬ ಆಪಾದನೆಗೆ ಗುರಿ ಆಗಬೇಕಾಗುತ್ತದೆ. ಇವೆರಡೂ ಅಲ್ಲ ಎಂದರೆ ಯಾವ ಮೊಕದ್ದಮೆ ನ್ಯಾಯಾಲಯದಲ್ಲಿ ಇನ್ನೂ ಜೀವಂತವಾಗಿ ಚರ್ಚೆಯಾಗುತ್ತಿದೆ. ಆ ನ್ಯಾಯಾಲಯದ ತೀರ್ಪಿಗೆ ನಾವು ಇಲ್ಲಿ ಮಾಡತಕ್ಕಂಥ ಚರ್ಚೆ ಒಂದು ರೀತಿ ಭಾದಕವನ್ನು ಒಡ್ಡುತ್ತದೆ ಎನ್ನತಕ್ಕಂಥಾದ್ದು ನನ್ನ ಮೂಲ ಪ್ರಶ್ನೆ. ಮಾನ್ಯ ಉಪಸಭಾಧ್ಯಕ್ಷಣೆಯವರೇ ಅದನ್ನು ತಮ್ಮಲ್ಲಿ ಮನವಿ ಮಾಡುತ್ತೇನೆ. ಈ ವಿಚಾರವನ್ನು ನಿಯಮ 190ರ ವ್ಯಾಪ್ತಿಯಲ್ಲಿ ಏನು ನಾನು ಪ್ರಸ್ತಾಪ ಮಾಡಿದ್ದೇನೆ ಎಲ್ಲಾ ನಿಯಮಗಳನ್ನೂ ನಾನು ಅನುಸರಿಸಿ ಜಾಗರೂಕತೆಯಿಂದ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಈ ಸದನದ 5.9.91ರ ಚರ್ಚೆಯನ್ನು ಮೂಲ ಪ್ರತಿಗಳ ಪ್ರತಿ ಮಾಡಿಸಿ ಕಳುಹಿಸಿದ್ದೇನೆ.

ಈ ಸದನದಲ್ಲಿ ಹೇಳಿರತಕ್ಕಂಥ ಮಾತುಗಳು ಬದಲಾವಣೆ ಆಗುವುದಕ್ಕೆ ಸಾಧ್ಯ ಇಲ್ಲ. ಅದರಲ್ಲಿ ಅಭಿವ್ಯಕ್ತವಾಗಿದೆ. ನನ್ನ ದಾಖಲೆಗಳು ಏನಾದರೂ ಇದ್ದರೆ ಈ ಸದನದಲ್ಲಿ ದಾಖಲಾಗಿರತಕ್ಕಂಥ ದಾಖಲೆಗಳೇ ನನ್ನ ದಾಖಲೆಗಳು. ಮಾನ್ಯ ಉಪಸಭಾಧ್ಯಕ್ಷಣೆಯವರೇ ಈಗ ನಮ್ಮ ರಾಜ್ಯದಲ್ಲಿ ಬಂಧೀಖಾನೆಗಳ ಮಂತ್ರಿಗಳು ಇದ್ದಾರೆ.

ಅವರ ಮೇಲೆ ಸಿ.ಸಿ. 31, ನಾನು ಅದರ ವಿವರಕ್ಕೆ ಹೋಗುವುದಿಲ್ಲ. ತಮ್ಮ ಅನುಮತಿಯನ್ನು ಇಷ್ಟಕ್ಕೆ ಕೇಳುತ್ತೇನೆ. ಸಿಸಿ31 87 ಪ್ರಕಾರ ಒಂದು ಪ್ರಕರಣ ಜೆ.ಎಫ್.ಎಮ್.ಸಿ. ಕನಕಪುರದಲ್ಲಿ ಪೆಂಡಿಂಗ್ ಇದೆ. ಎಂಬ ವಿಚಾರವನ್ನು ಈ ಸದನದಲ್ಲಿ ಹೇಳಿದ್ದೇನೆ. ನಾನು ಅದರ ವಿವರಕ್ಕೆ ಯಾವ ಸಂಬಂಧ ಕೇಸ್ ಅದರ ಬಗ್ಗೆ ಹೋಗುವುದಿಲ್ಲ. ನಾನು ಕಾಲಕ್ಕೆ ಹೇಳಿದ್ದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಸ್ವಲ್ಪ ಈಲ್ಡ್ ಆದರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮದ ಪ್ರಕಾರ ಈ ಪ್ರಶ್ನೆಯನ್ನು ಎತ್ತಿದ್ದಾರೆ. ಅದನ್ನು ತೆಡಯಬೇಕೆಂಬ ಇಚ್ಚೆ ನಮಗೆ ಇಲ್ಲ. ಆದರೆ ಕೆಲವು ನಿಯಮಗಳ ಪಾಲನೆ ವಿಚಾರದಲ್ಲಿ ಕೆಲವು ಶಬ್ದಗಳು ಮತ್ತು ಅದರಲ್ಲಿ ಪಾಲಿಸಬೇಕಾದಂಥ ಕೆಲವು ಕ್ರಮಗಳು ಇವೆ. ಈಗ ತಾವು ಬಿಸಿನೆಸ್‌ಗೆ ಎಂಟರ್ ಆಗುವ ಮೊದಲು ರೈಸ್ ಮಾಡಿರುತ್ತೀರಿ. It is for the speaker. ತಮ್ಮ ಜವಾಬ್ದಾರಿ ಕೆಲವು ಇದೆ. ನೋಟೀಸ್ ಬಂದಮೇಲೆ, ಆ ನೋಟೀಸ್ ವಿಚಾರದಲ್ಲಿ ಅದಕ್ಕೆ ಬೇಕಾದಂಥ ದಾಖಲೆಗಳು ಇದೆಯೇ. ಅದಕ್ಕೆ ಸೀಮಿತವಾದ ಕ್ಷೇತ್ರ ಏನು, ಅದು ನಮೂದಿಸಿಲ್ಲಟ್ಟಿದೆಯೇ, ಆ ಕ್ಷೇತ್ರದ ಒಳಗೆ ಬರುತ್ತದೆಯೇ ಎಂಬ ವಿಚಾರವನ್ನು ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಇಲ್ಲ ಎಂದರೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರ ಎತ್ತಿ ಮುಂದೆ ವಿಸ್ತಾರವಾಗಿ ಅದರ ಚರ್ಚೆ, ವಿಶ್ಲೇಷಣೆಗೆ ಹೋಗುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೋಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಚರ್ಚೆಯ ವಿಶ್ಲೇಷಣೆಗೆ ಅವರು ಹೋಗುವುದಾದರೆ ಅದರ ಬಗ್ಗೆ ತಾವು ಒಪ್ಪಿಗೆ ಕೊಡಬೇಕಾಗುತ್ತದೆ. ಈಗ ರೈಜ್ ಮಾಡಲಿಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದೀರಾ? ಮೂವ್ ಮಾಡಲಿಕ್ಕೆ ತಮ್ಮ ಕನ್ಸೆಂಟ್ ಕೊಟ್ಟಿಲ್ಲ. ಆದ್ದರಿಂದ ಇದನ್ನು ದಯಮಾಡಿ ತಮ್ಮ ಅಧಿಕಾರಕ್ಕೆ ಸೀಮಿತವಾಗಿ 190 ಮತ್ತು 191ರ ನಿಯಮದಲ್ಲಿ ಯಾವ ಯಾವ ವಿಚಾರಗಳು ಕ್ರಮಗಳು ದಾಖಲೆಗಳು ಬರುತ್ತವೆ. ಅವುಗಳನ್ನು ಪರಿಶೀಲನೆ ಮಾಡಬೇಕು. ತಾವು ಈಗಾಗಲೇ ಅವುಗಳನ್ನು ಪರಿಶೀಲನೆ ಮಾಡಿ ಆಗಿದ್ದರೆ ನಾನು ಮಾತನಾಡುವುದಿಲ್ಲ. ಪರಿಶೀಲನೆ ಮಾಡದೆ ಇದ್ದರೆ ತಾವು ಅವುಗಳನ್ನು ಪರಿಶೀಲನೆ ಮಾಡಬೇಕು. ಅವುಗಳನ್ನು ಪರಿಶೀಲನೆ ಮಾಡಿ ಆಗಿದ್ದರೆ ಇವತ್ತೋ ಅಥವಾ ನಾಳೆಯೋ ತಮಗೆ ಇರತಕ್ಕಂಥ ಸಮಯದಲ್ಲಿ ಕನ್ಸೆಂಟ್ ಕೊಡಬಹುದು. ಇದನ್ನು ವಿಸ್ತಾರವಾಗಿ ಪರಿಶೀಲನೆ ಮಾಡಿ ಆಮೇಲೆ ಇದನ್ನು ಮೂವ್ ಮಾಡತಕ್ಕಂಥ ಒಂದು ಅಧಿಕಾರ ಚಲಾವಣೆ ಮಾಡತಕ್ಕಂಥಾದ್ದು ತಮಗೆ ಸಂಪೂರ್ಣ ಸಾರ್ವಭೌಮತ್ವವುಳ್ಳ ಅಧಿಕಾರ ಬಿಟ್ಟು ಕೊಟ್ಟಿದ್ದೇವೆ. ಆದ್ದರಿಂದ ತಮಗೆ ಗೊತ್ತಿದೆ. ಇದರ ಬಗ್ಗೆ ದಾಖಲೆಗಳೆಲ್ಲಾ ಸರಿಯಾಗಿವೆಯೇ? ಸಮರ್ಪಕವಾಗಿದೆಯೇ ಎಂಬದನ್ನು ಪರಾಂಬರಿಸಿ ಆಗಿದ್ದರೆ, ಇದರ ಬಗ್ಗೆ ನಿರ್ಣಯ, ವಿಚಾರ ಮಾಡಿದ್ದೇನೆ ಅಂತ ಹೇಳಿದರೆ ಅದಕ್ಕೆ ನಮ್ಮದು ಅಡ್ಡಿ ಇಲ್ಲ. ಅದನ್ನು ತಾವು ಮಾಡದೆ ಇದ್ದರೆ ಅದನ್ನು ಪರಾಂಬರಿಸಬೇಕು. ಆದಾದ ಮೇಲೆ ತಾವು ನಿರ್ಣಯ ತೆಗೆದುಕೊಳ್ಳಬೇಕು. ಆಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮುಂದುವರಿಸುವುದಕ್ಕೆ ಅವಕಾಶ ಕೊಡಬೇಕು ಇಲ್ಲದಿದ್ದರೆ ಎರಡು ಕೆಲಸ ಆಗುತ್ತದೆ. ಮೊದಲು ರೈಜ್ ಮಾಡಿ ಮೆರಿಟ್‌ಗೆ ಹೋಗತಕ್ಕಂಥಾದ್ದು, ರೈಜ್ ಮಾಡಿದ ಮೇಲೆ ತಮ್ಮ ಕನ್ಸೆಂಟ್ ಕೊಡುವುದು. ಆಮೇಲೆ ಮೂವ್ ಮಾಡುವುದು ಈ ತರಹ ಬಹುಶಃ ಈ ಸದನದ ಕ್ರಮಕ್ಕೆ ಅನುಗುಣವಾಗಿಲ್ಲವೆಂದು ನಾನು ಸಬ್‌ಕಮಿಟಿ ಮಾಡುತ್ತೇನೆ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಣೀಯವರೇ ತಾವು ಹೇಳುವುದಕ್ಕಿಂತ ಮುಂಚೆ ಅವರು ಮಾತನಾಡಿದ ಮೇಲೆ ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಾನು 190ರ ರೂಲ್ ಪ್ರಕಾರ ಹಕ್ಕುಚ್ಯುತಿ ಪ್ರಸ್ತಾಪ ಮಾಡಿದ್ದೇನೆ. ನಿರ್ದಿಷ್ಟವಾಗಿ ಹೇಳಿದ್ದೇನೆ. ಸದನದ ಹಕ್ಕುಚ್ಯುತಿ ಆಗಿದೆ ಎಂದು. ಆದ್ದರಿಂದ ನಿಯಮ 190ರಲ್ಲಿ ಯಾವ ಅಬ್ಜೆಕ್ಷನ್ ಅನ್ನು ನಮ್ಮ ಮಾನ್ಯ ಪಾರ್ಲಿಮೆಂಟರಿ ಆಫೇರ್ಸ್ ಮಿನಿಸ್ಟರ್ ಎತ್ತಿದರೋ ಅದು ಸಿಂಧು ಆಗುವುದಿಲ್ಲ. ಇನ್ನು ನಿಯಮ 191ರ ಪ್ರಕಾರ ಎನು ಸೂಚನಾಪತ್ರ ಕೊಡತಕ್ಕಂಥಾದ್ದು ಇದೆ. ಅದು ತಮಗೆ ಗೊತ್ತಿರುವ ಹಾಗೆ ಕ್ರಮಬದ್ಧವಾಗಿ ಕೊಟ್ಟಿದ್ದೇನೆ. ದಾಖಲೆಗಳು ಇದ್ದರೆ ಒದಗಿಸಬೇಕು. ಅದಕ್ಕೆ ನಾನು ಹೇಳಿದೆ ದಾಖಲೆಗಳು ಈ ಸದನದಲ್ಲಿರತಕ್ಕಂಥಾದ್ದೇ ದಾಖಲೆಗಳು. ಈ ಸದನದ ದಾಖಲೆಗಳನ್ನು ನಾನು ಪ್ರತಿ ಮಾಡಿಸಿ ಕೊಟ್ಟಿದ್ದೇನೆ. ಇದನ್ನು ಕಳುಹಿಸುವುದಕ್ಕೆ ಮುಂಚೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅವು ಸಫಿಷಿಯಂಟಾ?

ಶ್ರೀ ಡಿ.ಬಿ. ಚಂದ್ರೇಗೌಡ: ಅವು ಸಫಿಷಿಯಂಟೇ ಎನ್ನುವುದಕ್ಕೆ ನಾನು ಹೇಳಬೇಕಲ್ಲ. ಈ ಸದನದ ದಾಖಲೆಗಳನ್ನು ನಾನು ಕೊಟ್ಟಿದ್ದೇನೆ. ಇದರಲ್ಲಿ ಮೂರು ವಿಚಾರಗಳು ಇವೆ. ನಾನು ರೂಲ್ 192ರ ಪ್ರಕಾರ ಕೆಲವು ಷರತ್ತುಗಳನ್ನು ಪೂರೈಸಿದ್ದೇನೋ ಇಲ್ಲವೋ ಎನ್ನುವುದನ್ನು ನೋಡಬೇಕಾಗುತ್ತದೆ. ಮೊದಲನೇ ಷರತ್ತು ಏನಿದೆ?.....

ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಕಳುಹಿಸಿರುವ ನೋಟೀಸ್ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಿ ಕನ್ಸ್ಟ್ಗೆ ಹೌದು ಅಥವಾ ಇಲ್ಲ ಅಂದ ಮೇಲೆ ಷರತ್ತಿನ ಪ್ರಶ್ನೆ ಬರುತ್ತದೆ. There is a lot of difference.

ಉಪಾಧ್ಯಕ್ಷಣೀಯವರು; ಮಾನ್ಯ ಚಂದ್ರೇಗೌಡರೇ ಒಂದು ಮಾತು ಹೇಳಿಬಿಡುತ್ತೇನೆ. ಈಗ ತಾವು ನಮಗೆ ಕಳುಹಿಸಿರುವ ನೋಟೀಸ್ ಕಾಪಿ ಮಾತ್ರ ಬಂದಿದೆ. ಅದು ಸರಿಯಾಗಿದೆ. ಆದರೆ ಅದರ ಜೊತೆಗೆ ಯಾವ ಡಾಕ್ಯುಮೆಂಟನ್ನು ತಾವು ಲಗತ್ತಿಸಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಕಳುಹಿಸಿದ್ದೇನೆ.

ಉಪಾಧ್ಯಕ್ಷಣೀಯವರು: ಇಲ್ಲಿ ಪ್ರೊಸಿಡಿಂಗ್ಸ್ ಮಾತ್ರ ಕಳುಹಿಸಿದ್ದೀರಿ. ಇನ್ನು ಏನಾದರೂ ತಮ್ಮ ಹತ್ತಿರ ದಾಖಲೆಗಳು ಇದ್ದರೆ ಕಳುಹಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಉಪಾಧ್ಯಕ್ಷಣೀಯವರೇ ಬೇರೆ ಯಾವ ದಾಖಲೆಗಳ ಮೇಲೂ ನನ್ನ ವಾಸ್ತವಿಕ ಚರ್ಚೆ ಇಲ್ಲ. ನಿಮ್ಮ ದಾಖಲೆಗಳನ್ನೇ ತಾವು ಪ್ರಶ್ನೆ ಮಾಡುವುದಾದರೆ ಆ ಮಾತು ಬೇರೆ. ನಾನು ಇವತ್ತು ಕಳುಹಿಸಿತಕ್ಕಂಥ ದಾಖಲೆಗಳು ಏನಿವೆ ಅದು ಇಲ್ಲಿ ನಡೆದಿರತಕ್ಕಂಥ ಸದನದಲ್ಲಿ ನಡೆದಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿರತಕ್ಕಂಥಾದ್ದು. ಆ ಉತ್ತರದ ದಾಖಲೆಗಳು. ಆದ್ದರಿಂದ ನಾನು ದಾಖಲೆಗಳನ್ನು ಹುಡುಕಬೇಕಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ಅದು ತಮ್ಮ ಅಲೋಚನೆ ಪ್ರಕಾರ ಆದರೆ ತಾವು ಅದಕ್ಕೆ ಕನ್ವಿನ್ಸ್ ಆಗಬೇಕು. ದಾಖಲೆಗಳು ಯಾವ ದಾಖಲೆಗಳು ಎಂತಹ ದಾಖಲೆಗಳು....

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಆಡಿದ ಮಾತು. ನೀವು ಆಡಿರತಕ್ಕಂಥ ಮಾತುಗಳು. ಈ ಸದನದಲ್ಲಿ ಆಡಿರತಕ್ಕಂಥ ಮಾತಿನ ದಾಖಲೆಗಳು. ಆ ದಾಖಲೆಗಳ

ಪ್ರತಿ ಕಳುಹಿಸಿಕೊಟ್ಟಿದ್ದೇನೆ. ಅದಕ್ಕಿಂತ ಹೆಚ್ಚಿನ ಡಾಕ್ಯುಮೆಂಟ್ಸ್ ಮೇಲೆ ನನ್ನ ವಾದವನ್ನು ನಾನು ಮಂಡನೆ ಮಾಡಿಲ್ಲ.

ಉಪಾಧ್ಯಕ್ಷಣೀಯವರು: ತಾವು ಏನು ಪ್ರೊಸಿಡಿಂಗ್ಸ್ ಕೊಟ್ಟಿದ್ದೀರಿ ಅದರ ಬಗ್ಗೆ ನೋಡಬೇಕಾಗುತ್ತದೆ. ವೆರಿಫಿಕೇಶನ್ ಮಾಡಬೇಕಾಗುತ್ತದೆ. ಆದಾದ ಮೇಲೆ ಅಡ್ಮಿಟೆಡೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಡಿಸೈಡ್ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಉಪಾಧ್ಯಕ್ಷಣೀಯವರೇ, 190ರ ನಿಯಮದ ಪ್ರಕಾರ ಒಬ್ಬ ಮಾನ್ಯ ಸದಸ್ಯರು ಹಕ್ಕುಚ್ಯುತಿ ಎತ್ತಿದ ಮೇಲೆ ಅದರ ಬಗ್ಗೆ ನಿಯಮ 193ರ ಪ್ರಕಾರ ಅವರು ಚರ್ಚಿಸಬೇಕಾದಂತಹ ವಿಷಯ ಕ್ರಮಬದ್ಧವಾಗಿ ಇದೆಯೇ ಅಥವಾ ಇಲ್ಲವೇ ಎನ್ನುವುದನ್ನು ಅಷ್ಟು ಮಾತ್ರ ತಾವು ನೋಡತಕ್ಕಂಥಾದ್ದು ಅದು ಮೊದಲು ತಾವು ಮಾಡಬೇಕು ಒಂದು ಸಾರಿ ಪ್ರಸ್ತಾಪನೆ ಮಾಡಿ ಏನು ಕಳುಹಿಸಿದ್ದಾರೆ ಅದು ಕ್ರಮಬದ್ಧವಾಗಿ ಇದೆ ಎಂದು ಭಾವಿಸಿದರೆ ಅವರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಹಕ್ಕುಚ್ಯುತಿ ಪ್ರಶ್ನೆ ಎತ್ತಿದ್ದಾರೆ. ಆ ಬಗ್ಗೆ ಅವರಿಗೆ ಸಂಕಿಪ್ತ ಹೇಳಿಕೆ ಮಾಡಲಿಕ್ಕೆ ಅವಕಾಶ ಮಾಡಿ ಕೊಡಬೇಕು. ಇವತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ ಏನು ಕೇಳುತ್ತಿದ್ದಾರೆಂದರೆ, ಒಂದು ಸಾರಿ ನಾವು ಒಂದು ಹಕ್ಕುಚ್ಯುತಿ ಆಪಾದನೆ ಮೇಲೆ ಒಂದು ಸೂಚನೆ ಕಳುಹಿಸಿದ ಮೇಲೆ, ಅದು ಕ್ರಮವಾಗಿದೆಯೆಂದು ತಾವು ಹೇಳಿ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಅನುಮತಿ ನೀಡಿದ ಮೇಲೆ ಅವರು ಹೇಳಿಕೆಯನ್ನು ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗುತ್ತದೆ ಅದು ನಿಯಮ 193ರ ಪ್ರಕಾರ.

Sri M. VEERAPPA MOILY : You are at the Notice state.

Sri D.B. CHANDRE GOWDA : No. I have been asked to ...

(ಗೊಂದಲ)

I got the message from the Chair that the notice is in order under Rule 190. Otherwise I would not have done.

ಶ್ರೀ ಹೆಚ್. ಏಕಾಂತಯ್ಯ : "ಒಂದು ಸಾರಿ 193ರ ಪ್ರಕಾರ ಅಧ್ಯಕ್ಷರು ಅನುಮತಿ ನೀಡಿದಾಗ ಚರ್ಚಿಸಬೇಕಾದಂಥ ವಿಷಯವು ಕ್ರಮವಾಗಿದೆಯೆಂದು ಭಾವಿಸಿದಾಗ ಪ್ರಶ್ನೆಗಳ ತರುವಾಗ ಮತ್ತು ಕಾರ್ಯಕಲಾಪಗಳ ಪಟ್ಟಿಯು ಪ್ರಾರಂಭವಾಗುವುದಕ್ಕಿಂತ ಮುಂಚೆ ಪ್ರಶ್ನಿಸಲು ಅಪೇಕ್ಷಿಸುವ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರೆಯತಕ್ಕದ್ದು. ಆ ಸದಸ್ಯರು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲತಕ್ಕದ್ದು ಮತ್ತು ಹಕ್ಕುಬಾಧ್ಯತೆಯ ಪ್ರಶ್ನೆಯನ್ನು ಪ್ರಸ್ತಾಪಿಸಲು ಎತ್ತಲು ಅನುಮತಿ ಕೋರಿ ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಕಿಪ್ತ ಹೇಳಿಕೆಯನ್ನು ನೀಡಬೇಕು." ಅದು 193. ಆ ಪ್ರಕಾರ ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಏನು ಹಕ್ಕುಬಾಧ್ಯತೆಯ ಪ್ರಶ್ನೆ ತಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕೆ ತಾವು ಅವರಿಗೆ ಅನುಮತಿಯನ್ನು ಕೊಟ್ಟಿದ್ದೀರಿ. ತಾವು ದಯವಿಟ್ಟು ಅವರು ಸಂಕಿಪ್ತ ಹೇಳಿಕೆಯನ್ನು ನೀಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣೀಯವರೆ, ಈಗ ಬಹುಶಃ ಹಕ್ಕುಚ್ಯುತಿಯ ನಿರ್ಣಯಕ್ಕೆ ನೋಟೀಸ್ ಕೊಡತಕ್ಕಂಥಾದ್ದು, ಅದನ್ನು ಎತ್ತತಕ್ಕಂಥಾದ್ದು, ಇದೇನು ಹೊಸದಲ್ಲ, ಅನೇಕ ಪ್ರಿವಿಲೇಜ್ ಮೋಷನ್‌ಗಳು ಬಂದಿದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸಹಾ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡು

ಕಲಸ ಮಾಡಿದ್ದಾರೆ. ನಾವು ಗಂಟೆಗಟ್ಟಲೆ ಪ್ರಿವಿಲೇಜ್ ಮೋಷನ್ ಬಗ್ಗೆ ಮಾತನಾಡಿದ್ದೇವೆ. ಅದು ಎಲ್ಲಾ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕೇಳುವುದಿಷ್ಟೇ, ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಅವಕಾಶ ಇದ್ದೇ ಇದೆ. ಅದು ಕೇಳುವ ಪ್ರಶ್ನೆ ಅಲ್ಲ. ಅದು ತಮ್ಮದೇ ಆದಂಥ ಅವಕಾಶ ಅಷ್ಟೇ. ಆ ಅವಕಾಶದಿಂದ ನಿಮ್ಮನ್ನು ವಿವಂಚನೆಗೊಳಿಸಬೇಕೆನ್ನುವ ಇಚ್ಛೆ ನಮಗಂತೂ ಇಲ್ಲ. ಆದರೆ ನಾವು ಹೊಸ ಸಂಪ್ರದಾಯಗಳನ್ನು ಈ ದಿಸೆಯಲ್ಲಿ ಹಾಕುವುದು ಬೇಡ.

(ಸನ್ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾವು ಹೊಸ ಸಂಪ್ರದಾಯಗಳನ್ನು ಹಾಕುವುದು ಬಹಳ ತಪ್ಪಾಗುವುದು. ಏಕೆಂದರೆ ಇಲ್ಲಿ ಪ್ರಶ್ನೆ ಇರುವುದು ತಾವು ಒಂದು ನೋಟೀಸನ್ನು ಕೊಟ್ಟಿದ್ದೀರಿ. ಆ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನಿಯಮ 193ರ ಪ್ರಕಾರ, we are just at that stage. ಪ್ರಸ್ತಾಪ ಮಾಡಿದ ಮೇಲೆ ತಮ್ಮ ಪ್ರಕಾರ ತಾವು ದಾಖಲೆ ಕೊಟ್ಟಿದ್ದೀರಿ. ದಾಖಲೆ ತಮ್ಮ ಪ್ರಕಾರ ಯಾವುದೆಂದರೆ, ಪ್ರೊಸಿಡಿಂಗ್ಸೇ ದಾಖಲೆ ಎಂದು ಹೇಳುತ್ತೀರಿ. ಒಂದು ಪ್ರೊಸೀಡಿಂಗ್ಸ್ ದಾಖಲೆ ಎಂದು ಹೇಳುವಾಗ, ಸನ್ಮಾನ್ಯ ಅಧ್ಯಕ್ಷರು, ಆ ಪ್ರೊಸೀಡಿಂಗ್ಸ್ ಅಥೆಂಟಿಕೇಟೆಡ್ ಇದೆಯೆಂದು ಹೇಳಿ ಆ ಒಂದು ಭಾಗ ನೋಡಬೇಕಾಗುತ್ತದೆ ಎರಡನೆದಾಗಿ question of privilege ಗೆ ಸಂಬಂಧಪಟ್ಟಂತೆ, ವಿಚಾರಗಳ ಬಗ್ಗೆ ಬರೀ ಪ್ರೊಸೀಡಿಂಗ್ಸ್ ದಾಖಲೆಯಾಗುವುದಿಲ್ಲ ಸನ್ಮಾನ್ಯ ಅಧ್ಯಕ್ಷರೆ, he has raised certain issues in that notice. ಆ ಇಶ್ಯುಸನ್ನು ಸಪೋರ್ಟ್ ಮಾಡತಕ್ಕಂಥ, ಬೆಂಬಲಿಸತಕ್ಕಂಥ ದಾಖಲೆಗಳು ಬೇಕಾಗುತ್ತವೆ. ಏಕೆಂದರೆ for a proper and fair consideration of the privilege issue ತಾವು ಮಾತನಾಡಿದ್ದು ನಾವು ಈ ಕಡೆ ಮಾತನಾಡಿದ್ದು ಇದೇ ದಾಖಲೆಯಾಗಿ ಪ್ರಿವಿಲೇಜ್ ಮೋಷನ್ ಆಗುವುದಿಲ್ಲ. it is something more than that. ಏಕೆಂದರೆ ತಾವು ಕೆಲವು ವಿಚಾರಗಳನ್ನು ಹೇಳಿದ್ದೀರಿ. If that is so, certain facts have to be supported by certain documents. ಅದು ಡಾಕ್ಯುಮೆಂಟ್ಸ್ it is not for me to suggest but it is for the consideration of the Chair. ಏಕೆಂದರೆ ಅದು ಪ್ರೊಸಿಡಿಂಗ್ಸ್ Whether it is just sufficient to consider it that is another matter. ಅದರಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಕೆಲವು ಫ್ಯಾಕ್ಟ್ಸ್‌ನ್ನು ಹೇಳಿದ್ದಾರೆ. ಅದರ ಬಗ್ಗೆ ಬೆಂಬಲಿಸಬೇಕಾಗುತ್ತದೆ. ಬೆಂಬಲಕ್ಕೆ ಏನು ಡಾಕ್ಯುಮೆಂಟ್ಸ್ ಇದೆ? ಏನೂ ಇಲ್ಲ. Except the proceedings, there are no other documents to support those facts.

ಅವರು ಹೇಳುವುದು ನಾವು ರಿಬೆಟ್ ಮಾಡುವಂಥಾದ್ದು ಅಥವಾ ನಾವು ಹೇಳುವಂಥಾದ್ದು ಅವರು ರಿಬೆಟ್ ಮಾಡತಕ್ಕಂಥಾದ್ದು ಇಷ್ಟಕ್ಕೆ privilege motion cannot be well founded even prima-facie ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಈ ಸದನದಲ್ಲಿ ಈ ನಿಯಮದ ಪ್ರಕಾರ ಇಲ್ಲಿ ಅನುಸರಿಸತಕ್ಕಂಥ ಕೆಲವು ಪರಂಪರೆಗಳ ಪ್ರಕಾರ ನೋಟೀಸ್ ಕೊಟ್ಟ ಮೇಲೆ ರೈಸ್ ಮಾಡಲಿಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಅವಕಾಶ ಕೊಟ್ಟಾಗ ಅದು document whether it is supported by document.

ತಾವು ವಿರೋಧ ಪಕ್ಷದ ನಾಯಕರ ಪ್ರಕಾರ those documents may be sufficient but it may not be sufficient according to you.

ತಮ್ಮ ಅಭಿಪ್ರಾಯದ ಪ್ರಕಾರ ಆ ಡಾಕ್ಯುಮೆಂಟ್ಸ್ ಕಡಿಮೆಯಾಗಬಹುದು. ಇನ್‌ಸಫಿಷಿಯಂಟ್ ಆಗಬಹುದು ಅಥವಾ ಇನ್ನೂ ಡಾಕ್ಯುಮೆಂಟ್ಸ್ ಬೇಕೆಂದು ತಮಗೆ ಅನಿಸಬಹುದು. That is for you to examine either here right now or in the chamber. ಆಮೇಲೆ ತಾವು ನಾಳೆ ಅಥವಾ ನಾಡಿದ್ದು ಅಥವಾ ತಮಗೆ ಇರತಕ್ಕಂಥ ಸಮಯದಲ್ಲಿ ಅದನ್ನು ಎತ್ತಲಿಕ್ಕೆ ಅವಕಾಶ ಕೊಡಬಹುದು. ಸನ್ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. It is a privilege motion concerned with the hon'ble Chief Minister. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಈ ಹಂತದಲ್ಲಿ ಅದನ್ನು ವಿಶ್ಲೇಷಣೆ ಮಾಡಿ, ವಿಸ್ತಾರಕ್ಕೆ ಮೆರಿಟ್ ಮೇಲೆ ಹೋಗತಕ್ಕಂಥ ಒಂದು ಪ್ರಶ್ನೆ ಈ ಹಂತದಲ್ಲಿ ಅದು ಉದ್ಭವವಾಗುವುದಿಲ್ಲ. ಆದ್ದರಿಂದ ಅದು ಯಾವಾಗ ಉದ್ಭವ ಆಗುತ್ತದೆ ಎಂದು ಹೇಳಿದರೆ ತಾವು ಆ ನೋಟೀಸ್ ಕೊಟ್ಟದ್ದು ಡಾಕ್ಯುಮೆಂಟ್ಸ್ ಈಸ್ ಸಫಿಷಯೆಂಟ್ ಎಂದು ಹೇಳಿ ಅಭಿಪ್ರಾಯಕ್ಕೆ ಬಂದರೆ the hon'ble leader of Opposition may be entitled. But unless the Hon'ble Speaker comes to a prima facie conclusion with regard to the documents to be supported with regard to the privilege motion, with regard to proceedings, or any other documents which may be necessary to support the facts and support the cause of action which is illustrated by the Hon'ble Opposition Leader, it is a matter for examination of the Hon'ble Speaker. At this State I don't think he is entitled to go into the merits of it.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮೂರು ದಿವಸಗಳ ಮುಂಚಿತವಾಗಿಯೇ ನಾನು 190ನೇ ನಿಯಮದಂತೆ ನೋಟೀಸನ್ನು ಕೊಟ್ಟಿದ್ದೇನೆ. ಅದು ಆದಮೇಲೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದೆ. ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರು. ಅದು ಆದಮೇಲೆ ದಾಖಲೆಗಳ ವಿಚಾರವನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಅನುಮತಿ ಸಿಗುವ ಮುಂಚೆ ಪ್ರಸ್ತಾಪ ಮಾಡುವುದಕ್ಕೆ ಹೋಗಲೇ ಇಲ್ಲ. I have been permitted to sumbit. ಆದ್ದರಿಂದ ನನ್ನ ಈ ಒಂದು ವಿಚಾರವನ್ನು ಎತ್ತುವುದಕ್ಕೆ ಅನುಮತಿ ಸಿಕ್ಕಿತು. ಎನ್ನುವಂತಹ ಅಭಿಪ್ರಾಯದಿಂದ ದಾಖಲೆಗಳ ವಿಚಾರವನ್ನು ಏನು ಅವರು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನಾನು ಹೇಳಿದೆ. ಸದನದಲ್ಲಿನ ದಾಖಲೆಗಳೇ ದಾಖಲೆಗಳು. ಸದನದಲ್ಲಿ ಮಾತನಾಡಿರತಕ್ಕ ಈ ವಿಚಾರದಲ್ಲಿ ಒಂದು. ನಾನು ಕೆಲವು ಆಪಾದನೆಗಳನ್ನು ಮಾಡಿದ್ದೇನೆ. ಇಲ್ಲ ನಾನು ಮಾಡಿದ ಆಪಾದನೆಗಳು ಸರಿಯಲ್ಲ ಎನ್ನತಕ್ಕದ್ದು ನಿರ್ಣಯ ಆಗಬೇಕು ಇಲ್ಲವೇ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಆ ಉತ್ತರ ಸರಿಯಲ್ಲ ಎಂತ ಆಗಬೇಕು. ಇಲ್ಲ ಅದು ಪ್ರಿವಿಲೇಜ್ ಆಗಬೇಕು, ಅಥವಾ ಇದು ಪ್ರವಿಲೇಜ್ ಆಗಬೇಕು. ಇವೆರಡೂ ಆಗದೇ ಇದ್ದರೆ ಕೋರ್ಟಿನ ಮೂಲಕ ನಾನು ಕೆಲವು ಹಿಂದಿನ ದಾಖಲೆಗಳನ್ನು ಏನು ಅಲ್ಲಿ ಹಾಕಿದ್ದೇನೆ, ನನ್ನ ಪ್ರಾರಂಭಿಕವಾದ ಅವಿಶ್ವಾಸ ನಿರ್ಣಯದ ಭಾಷಣದಲ್ಲಿ. ಆ ದಾಖಲೆಗಳು ತಪ್ಪು ಎಂದು ಆಗಬೇಕು. ಆದ್ದರಿಂದ ಇಲ್ಲಿ ಮೂರು ಮುಖ್ಯವಾದ ವಿಚಾರಗಳು ಸೇರಿವೆ. ಒಂದು ನಾನು ಮಾಡಿರತಕ್ಕಂಥ ಆಪಾದನೆಗಳಲ್ಲಿ ಹುರುಳಿಲ್ಲ ಎಂದು ಆಗಬೇಕು. ಇಲ್ಲವೇ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಹುರುಳಿಲ್ಲ ಎಂದು ಆಗಬೇಕು. ಇಲ್ಲ ದಾಖಲೆಗಳಲ್ಲಿ ದೋಷ ಇದೆ

ಎಂದು ಆಗಬೇಕು. ಆದ್ದರಿಂದ ಈ ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿ ಅನುಮತಿ ಸಿಕ್ಕಿದ ಮೇಲೆ ನಾನು ಹೇಳಿದೆ. ನನ್ನ ಈ ದಾಖಲೆಗಳಲ್ಲಿ ನಾನು ಎತ್ತಿದ ಪ್ರಶ್ನೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಂದ ಬಂದ ಉತ್ತರದಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಆ ಅಂಶ ಯಾವ ಕೇಸನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆ ಕೇಸ್‌ನಲ್ಲಿ ತಾವು ಕೂಡ ಬಹಳ ಒಳ್ಳೆಯ ಸಲಹೆಯನ್ನು ಆ ಕಾಲಕ್ಕೆ ಕೊಟ್ಟಿದ್ದೀರಿ. ಕಾಶನ್ ಮಾಡಿದ್ದೀರಿ, ಇಡೀ ಸದನವನ್ನು ಮತ್ತು ನಾವು ಕೆಲಸ ಮಾಡತಕ್ಕಂಥ ನಾಯಕರನ್ನು ಮತ್ತು ನನ್ನನ್ನು ತಾವು ಕಾಷನ್ ಮಾಡಿದ್ದೀರಿ. I will just go through your own observations, for the purpose of the House and getting myself enlightened also.

ತಾವು ಏನು ಹೇಳಿದ್ದೀರಿ. I will quote. On 5.9.91, "If the identity of the person is under dispute, there is no obligation caused on this Hon'ble Member as a citizen of this country to go to the court if there is a mistaken identity."ಎಂದು ಆ ಕಾಲಕ್ಕೆ ಅಧ್ಯಕ್ಷರು ಹೇಳಿದ್ದಾರೆ. ಇದು ನನ್ನ ಜವಾಬ್ದಾರಿ."

Mr. VEERAPPA MOILY: If I can cite something from Kaul & Shakdhar.

Sri. D.B. CHANDREGOWDA: Please bear with me for a minute. ಬಹಳ ಹೊತ್ತು ನಾನು ನಿಮ್ಮ ಮಾತನ್ನು ಕೇಳಿದ್ದೇನೆ. ಸಮಾಧಾನವಾಗಿ ನಿಮ್ಮ ಮಾತನ್ನು ಕೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಸಮಾಧಾನ ನನಗೆ ಗೊತ್ತಿಲ್ಲ..

ಶ್ರೀ ಡಿ.ಬಿ. ಚಂದ್ರೇಗೌಡ : ಆದ್ದರಿಂದ ನಾನು ಆಗಲೇ ಎಚ್ಚರಿಕೆ ವಹಿಸಿದ್ದೇನೆ. ತಮ್ಮ ಎಚ್ಚರಿಕೆ ಬಂದ ಮೇಲೆ ನನ್ನ ಜವಾಬ್ದಾರಿ ಹೆಚ್ಚಾಯಿತು. ನಾನೇನಾದರೂ ಅಪರಾಧವನ್ನು ಮಾಡಿದ್ದೇನೆಯೋ? ಅದಕ್ಕಾಗಿ ಪುನಃ ಮುಂದೆ ನಾನು ಹೇಳಿದೆ I am not trying to character Assassinate any individual Member or the Minister concerned. ಆಗ ಮಾನ್ಯ ಅಜೀಜ್ ಸೇಠ್‌ರವರು ಕೂಡ ಒಂದು ಮಾತು ಹೇಳಿದರು; ಜವಾಬ್ದಾರಿ ಮಂತ್ರಿಗಳಾಗಿ ನಾನು ಅವುಗಳನ್ನು ಈಗ ಹೇಳುವುದಿಲ್ಲ. ಯಾವಾಗ ಹೇಳಬೇಕೋ ಆಗ ಹೇಳುತ್ತೇನೆ. " I was also a victim of such false cases" ಎನ್ನುವಂತಹ ಮಾತನ್ನು ತಾವು ಹೇಳಿದ್ದೀರಿ. ನಾನು ಇಲ್ಲಿ ತಮ್ಮ ಗಮನಕ್ಕೆ ತರತಕ್ಕಂಥದ್ದು in a matter of privilege ನಾನು ಜವಾಬ್ದಾರಿಯಿಂದ ಏನು ಈ ಸದನದಲ್ಲಿ ಹೇಳಿದ್ದೇನೆ. ತಾವು ಹೇಳಿದ ಮೇಲಂತೂ ನಾನು ವಿಶೇಷ ಗಮನ ಕೊಟ್ಟು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಎಲ್ಲ ದಾಖಲೆಗಳು, ಕೋರ್ಟಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳು ಈಗಲೇ ನನ್ನ ಹತ್ತಿರ ಬೇಕು ಎಂದರೆ ತಮಗೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ.

12.30 ಪಿ.ಎಂ

ನಾನು ಇಲ್ಲಿ ತಪ್ಪು ಮಾಡಿಲ್ಲ ಎನ್ನತಕ್ಕಂಥಾದ್ದು ನನ್ನ ಮನಸ್ಸಿಗೆ ಸಮಾಧಾನವಾದ ಮೇಲೆ ಮುಖ್ಯಮಂತ್ರಿಗಳ ಉತ್ತರದಿಂದ ಸದನದ ಹಕ್ಕುಚ್ಯುತಿಯಾಗಿದೆ, ಸರಿಯಾದ ಮಾಹಿತಿಯನ್ನು ಸದನಕ್ಕೆ ಕೊಟ್ಟಿಲ್ಲ, ಇದರ ಪರಿಣಾಮ ಮುಂದೆ ಇರತಕ್ಕಂಥ ಕ್ರಿಮಿನಲ್ ಮೊಕದ್ದಮೆಯ ಮೇಲೆ ಕೂಡ ಆಗಬಹುದು. ಆದ್ದರಿಂದ ನನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ, ಈ ವಿಚಾರವು ಹಕ್ಕುಚ್ಯುತಿ ಸಮಿತಿಗೆ ಹೋಗಬೇಕು. ಇಲ್ಲವೇ ನೇರವಾಗಿ ತಾವು ಅದನ್ನು ಕಳುಹಿಸಬಹುದು. ಇಲ್ಲವೆ ಅದು

ಹಕ್ಕುಚ್ಯುತಿಗೆ ಹೋಗವುದಕ್ಕೆ ಸಮಾಧಾನಕರವಾದಂಥ ಅವಶ್ಯ ದಾಖಲೆಗಳು ಅದರಲ್ಲಿ ಇವೆ ಎಂಬುದನ್ನು ತಮಗೆ ಸಮಾಧಾನ ಮಾಡುವುದಕ್ಕೆ ನನಗೆ ಅವಕಾಶ ಕೊಟ್ಟರೆ ನಾನು ಈಗಲೇ ಅದನ್ನು ಮಾಡುವುದಕ್ಕೆ ಸಿದ್ಧನಿದ್ದೇನೆ. ಈ ಕುರಿತು ಈಗ ನಾನು ಮೆರಿಟ್‌ಗೆ ಹೋಗುವುದಿಲ್ಲ. I am very careful so far as these issues are concerned. ಮೆರಿಟ್‌ಗೆ ಹೋಗುವುದಕ್ಕಿಂತ ಮುಂಚೆ, ತಮ್ಮ ಮುಂದೆ ಸಬಮಿಟ್ ಮಾಡುತ್ತಾ ಇದ್ದೇನೆ. I have convinced the Chair about the admissibility under Rules 190 and the documents that I have referred to are the documents of the House, the debates of the House, and additional documents. Some of the documents I have refferred to in my No Confidence Motion and additional documents connected with this, I am prepared to produce before this House, through you Sir, right now, if you permit me. ಆದ ಕಾರಣ, ಇಂಥ ವಿಶೇಷ ಸಂದರ್ಭದಲ್ಲಿ,

SHRI. M. VEERAPPA MOILY: I can cite Kaul & Shakdhar in support of what I have said earlier. Page 263, latest edition:

> "The Speaker, before deciding whether the matter proposed to be raised as a question of privilege requires the intervention of the House and whether he should give his concent to the raising of the matter in the House, may given an opportunity to the person incriminated to explain his case to the Speaker."

That is also available to the person who is incriminated, even while raising. Parliamentary Affairs Minister ಇರಲಿ, ಇಲ್ಲದಿರಲಿ Chief Minister ಇರಲಿ, ಇಲ್ಲದೇ ಇರಲಿ ನಮ್ಮ ಹಕ್ಕನ್ನು ನಾವು ಚಲಾಯಿಸುತ್ತೇವೆ ಎಂಬ ಮಾತನ್ನು ಅವರು ಹೇಳಿದ್ದಾರೆ. The person will have to be present. So, the Hon'ble Chief Minister is entitiled tc be present, according to the conventions which have been laid down.

> "The Speaker may, if he thinks fit, also hear the views of the Members before deciding admissibility of a question of privilege."
>
> So, the Stage of admissibility is still there. We have not gone beyond that.
>
> " When a Member seeks to raise a question of privilege against another Member, the Speaker, before giving his constent to the raising of the matter in the House, always gives an opportunity to the Member complained against to place before him or the House such facts as may be pertinent to the matter."

Again that opportunity is available for us. Then,

> "While seeking to raise a question of privilege, a Member should lay before the House **all the necessary evidences..**"

I am qualifying the evidences..

"... all the evidences in support of his contention". Not one evidence, but all that is necessary should be there, because personal identification and all those questions have been raised in the privilege notice.

> "Production of further evidences at a subsequent date is not admissibles.s"

Even that opportunity is not available."The mover of the privilege motion should stand and fall on his own evidence which is just at that time available." Even time is not given.

> "There has been however an occasion where although Speaker had withheld his consent to the raising of a question of privilege, members again sought to raise the matter. Speaker, thereupon, observed that if there were any documents or evidence..."

That question does not arise now.

> "Occasionally, when the Member receives any complaint or notice thereof from a Member regarding assault or misbehaviour with him by the police authority, Speaker might, if he is satisfied, permit the Member to make a statement in the House."

We are at the admissibility stage. There sare certain rights which are guaranteed under conventions, I don't say under 'rules' but under conventions, before the Lok Sabha and before this House that the person incriminated has certain rihts which are enjoined. Whether we should deny that, is one thing. With regard to documents, all the necessary evidence is to be produced. No.1, proceedings will have to be subjectively satisfied; whether that constitutes a question of privilege or not and No.2, certain issues are raised and certain facts are raised; whether it is supported by any other documents?

All the necessary documents will have to be produced. Whether that has been done? Inview of this, I don't think we can proceed in this matter. He has raised this issue. Admissibility question will have to be considered, then only the consent arises. Let him leave at that stage and it is for the Hon'ble Speaker to consider further steps.

ಶ್ರೀ ಹೆಚ್. ವಿಶ್ವನಾಥಯ್ಯ: ಮಾನ್ಯ ಅಧ್ಯಕ್ಷರೆ, ಈ ಮುಂಚೆ ಈ ಮನೆಯಲ್ಲಿ ನಾನು ನಡೆಯಿತ್ತೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಹಕ್ಕುಬಾಧ್ಯತೆ ಪ್ರಶ್ನೆ ಬಗ್ಗೆ ತಮಗೆ ಗೊತ್ತಿರುವ ಹಾಗೆ 190 ರಿಂದ 196 ರವರೆಗೆ ನಾನು ನಿಯಮಗಳನ್ನು ಮಾಡಿಕೊಂಡಿದ್ದೇವೆ. ಈ ನಿಯಮಗಳಡಿಯಲ್ಲಿ ವಿರೋಧಪಕ್ಷದ ನಾಯಕರು ಈ ಹಕ್ಕುಬಾಧ್ಯತೆ ಪ್ರಶ್ನೆ ಬಗ್ಗೆ ಪ್ರಸ್ತಾಪ ಮಾಡಿದರು ಅದರ ನಂತರ ಈ ನಿಯಮದ ಮೇರೆಗೆ ತಮ್ಮ ಅನುಮತಿಯನ್ನು ಮಾನ್ಯ ಉಪಾಧ್ಯಕ್ಷಣಿಯವರು ನೀಡಿದರು ಇದರ ಬಗ್ಗೆ ಪ್ರಸ್ತಾಪಮಾಡಲು ವಿರೋಧ ಪಕ್ಷದ ನಾಯಕರಿಗೆ ಅನುಮತಿಯನ್ನೂ ಕೊಟ್ಟರು. ಅದನ್ನು ಪ್ರಸ್ತಾಪ ಮಾಡುವ ಘಟ್ಟದಲ್ಲಿ ಮಾನ್ಯ

ಸಂಸದೀಯ ವ್ಯವಹಾರಗಳ ಸಚಿವರು ಈ ಆಕ್ಷೇಪಣೆಯನ್ನು ಎತ್ತಿದ್ದಾರೆ. ಒಂದು ಸಾರಿ ಉಪಾಧ್ಯಕ್ಷಿಣಿಯವರು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕರೆದು ಈ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ ಎಂದು ಅನುಮತಿ ನೀಡದ ಮೇಲೆ ಈ ಯಾವ ಪ್ರಶ್ನೆಗಳೂ ಇಲ್ಲಿ ಉದ್ಭವವಾಗಲಾರವು. ಆದ್ದರಿಂದ ಅವರು ಹೇಳಿರುವ ರೀತಿಯ ಈ ಹಕ್ಕುಬಾಧ್ಯತೆ ಪ್ರಶ್ನೆಗಳು ಇದಕ್ಕೆ ಅನ್ವಯಿಸುವ ಷರತ್ತುಗಳ ಬಗ್ಗೆಯಾಗಲಿ ಅಥವಾ ಅವು ಕ್ರಮವಾಗಿದೆಯೇ ಅಥವಾ ಅಕ್ರಮವಾಗಿದೆಯೇ ಎಂಬುದು ಈಗಾಗಲೇ ತೀರ್ಮಾನವಾಗಿದೆ. ಮಾನ್ಯ ಉಪಾಧ್ಯಕ್ಷಿಣಿಯವರು ನಿಯಮ 193ರ ಪ್ರಕಾರ ಇದರ ಬಗ್ಗೆ ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕರಿಗೆ ಅನುಮತಿ ನೀಡಿದ್ದಾರೆ ಮತ್ತು ಅದರ ಮೇಲೆ ವಿರೋಧ ಪಕ್ಷದ ನಾಯಕರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಂಕ್ಷಿಪ್ತ ಹೇಳಿಕೆ ನೀಡಿದ್ದಾರೆ. ಈ ಘಟ್ಟದಲ್ಲಿ ನಾವಿದ್ದೇವೆ.

ಅಧ್ಯಕ್ಷರು : ಅನುಮತಿ ಕೊಟ್ಟಿಲ್ಲ..

Sri D.B. CHANDRE GOWDA: After that only I got up. Let us not interpret in our own way.

Mr. SPEAKER: If I have Understood correctly, you were asked to make a mention about that. That is all. That does not mean to say that the Speaker..

Shri D.B. CHANDRE GOWDa: Let us go to the record.

Mr. SPEAKER: We are still under Rule 190.

ಶ್ರೀ ಕೆ.ಹೆಚ್ ರಂಗನಾಥ್ : ನಾನು ಈ ಸಭೆಯಲ್ಲಿ ಇದ್ದೆ. ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆಂದರೆ, ಅದರ ಬಗ್ಗೆ ಉಪಾಧ್ಯಕ್ಷಿಣಿಯವರು ಡಿಸ್ಕಷನ್‌ಗೆ ಅನುಮತಿ ಕೊಟ್ಟಿಲ್ಲ. ಆದ್ದರಿಂದ ಇದು ಇನ್ನೂ ಪರಿಶೀಲನೆಯ ಸ್ಟೇಜ್‌ನಲ್ಲಿದೆಯೇ ವಿನಾಃ ಪ್ರಸ್ತಾಪ ಮಾಡತಕ್ಕ ಹಂತದಲ್ಲಿ ಇಲ್ಲ.

SRI. D.B. CHANDREGOWDA: I don't want to draw the Chair into the controversy. I have never done that.

ಶ್ರೀ ಹೆಚ್. ವಿಕಾಂತಯ್ಯ: ಇಲ್ಲಿ ನಾವು ವಿಷಯದ ಪರವಾಗಿ ಮಾತನಾಡುತ್ತಿರುವೆಯೇ ಹೊರತು ಯಾರೊಬ್ಬರ ಪರ ವಿರೋಧ ಮಾತನಾಡುತ್ತಿಲ್ಲ. ಅದು ನಿಯಮ 193 ರ ಪ್ರಕಾರ ಅನುಮತಿ ನೀಡಿದ್ದರೂ ಸಹ.

ಶ್ರೀ ಕೆಹೆಚ್. ರಂಗನಾಥ್ : ಅಧ್ಯಕ್ಷರೇ, ತಮ್ಮ ಚೇಂಬರಿನಲ್ಲಿ ಅಧಿಕೃತ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ಮುಂದಿನ ಪ್ರಶ್ನೆ ಉದ್ಭವಿಸುತ್ತದೆ, ಅಲ್ಲಿಯವರೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ ಇದು ಇನ್ನೂ ತಮ್ಮ ಪರಿಶೀಲನೆಯ ಹಂತದಲ್ಲಿದೆಯೇ ಹೊರತು ಇಲ್ಲಿ ಪ್ರಸ್ತಾಪ ಮಾಡುವ ಹಂತದಲ್ಲಿಲ್ಲ. ಅವರು ಮೊದಲು ತಮ್ಮನ್ನು ಕನ್ವಿನ್ಸ್ ಮಾಡಲಿ, ಅನಂತರ ಈ ಸಭೆಯನ್ನೂ ಕನ್ವಿನ್ಸ್ ಮಾಡಬೇಕಾಗುತ್ತದೆ. It is at that stage only.

MR. SPEAKER : I have got two questions to the Leader of Opposition. Are you satisfied that you have placed all the necessary evidence in support of your contention?

SHRI. D.B. CHANDRE GOWDA: Yes.

MR. SPEAKER: This is all you have that is enough?

SHRI H. EKANTHAIAH: Prima Facie whether the concerned is guilty or not?

MR. SPEAKER: I also want the Leader of the Oppositions response.

"The Speaker, before deciding whether the matter proposed to be raised as question of privilege requires intervention of the House and whether he should give his consent to the raising of the matter in the House, may give an opportunity to the person incriminated to explain his case to the Speaker."

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೇ ಹೇಳಿದ ನಾನು. Under 193.

MR. SPEAKER: That is also Mandatory.

SRI. D.B. CHANDRE GOWDA: Under 193, it is not my job.

MR. SPEAKER: No, it is my job. You are trying to do your job. I am trying to do my job. There is no conflict between two of us.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಅದಕ್ಕಾಗಿಯೇ ಮೂರು ದಿವಸಗಳ ಮುಂಚೆಯೇ ಕಳುಹಿಸಿದ್ದೇನೆ. ಪ್ರಿವಿಲೇಜ್ ನೋಟೀಸ್ ಬಂದಿದೆ ಅಂದರೆ ನನ್ನ ಅನಿಸಿಕೆಯೇನು? ಅದು ಅವರ ಗಮನಕ್ಕೆ ಹೋಗಿರುತ್ತದೆ. It was his bounden duty to be present in the House.

ಶ್ರೀ ಕೆ.ಹೆಚ್. ರಂಗನಾಥ್ : ಅದು ನಮ್ಮಿಬ್ಬರ ಡ್ಯೂಟಿಯೂ ಅಲ್ಲ. ಅದು ಅವರ ಡ್ಯೂಟಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕಾಗಿಯೇ ನಾನು ಹೇಳುತ್ತೇನೆ. "ನಿಯಮ 190ರ ಮೇಲೆ ಅನುಮತಿಯನ್ನು ನೀಡಿದಾಗ ಅದು ಚರ್ಚೆಗೆ ಬೇಕಾದ ಅವಶ್ಯ ಕ್ರಮವಾಗಿದೆ ಎಂದು ಭಾವಿಸಿದಾಗ ಪ್ರಶ್ನೆಗಳ ತರುವಾಯ ಮತ್ತು ಕಲಾಪಗಳ ಪಟ್ಟಿಯು ಪ್ರಾರಂಭವಾಗುವುದಕ್ಕಿಂತ ಮುಂಚೆ, ಪ್ರಶ್ನಿಸಲು ಅಪೇಕ್ಷಿಸುವ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರಯತಕ್ಕದ್ದು. ಆ ಸದಸ್ಯರು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲತಕ್ಕದ್ದು ಮತ್ತು ಹಕ್ಕುಬಾದ್ಯತೆ ಪ್ರಶ್ನೆಯನನು ಹಾಕಲು ಅನುಮತಿ ಕೋರಿ, ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಹೇಳಿಕೆಯನ್ನು ನೀಡಬೇಕು." ಆ ಸ್ಟೇಜ್‌ನಲ್ಲಿ ಇದ್ದೆ ನಾನು. I was at that stage.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಈ ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡಿದಂಥ ಸಂದರ್ಭದಲ್ಲಿ ಈ ಸದನದಲ್ಲಿ ಮಾಡಿದಂಥ ಸ್ಟೇಟ್‌ಮೆಂಟ್‌ನ್ನು ದಾಖಲೆಯಾಗಿ ನಿಮಗೆ ಕೊಟ್ಟಾಗ ಈ ದಾಖಲೆಗಳನ್ನು ತಾವು ನೋಡಿ ಇದು ಸಾಕು. ಸಾಕಷ್ಟು ಇದರಲ್ಲಿ ನೀವು ಪ್ರಿವಿಲೇಜ್ ಮೋಷನನ್ನು ಮೂವ್ ಮಾಡುವುದಕ್ಕೆ ಬೇಕಾದಂಥ ಸಂಗತಿಗಳು ಇದರಲ್ಲಿ ಅಡಕವಾಗಿದೆ ಎಂದು ತಮಗೆ ಅನಿಸಿದರೆ ಬಹುಶಃ ಇನ್ನೇನು ದಾಖಲೆಗಳನ್ನು ಕೊಡುವಂಥ ಅಗತ್ಯವಿಲ್ಲ. ಮೋಹನ್ ಮೇಕನ್ಸ್ ಸಂದರ್ಭದಲ್ಲಿಯೂ ಸಹಾ ನಾನು ತಮಗೆ ದಾಖಲೆಗಳನ್ನು ಕೊಟ್ಟಾಗ ತಾವು ಫರ್ದರ್ ದಾಖಲೆಗಳು ಇದ್ದರೆ ಕೊಡಿ ಎಂದು ಹೇಳಿದ್ದೀರಿ, ಅದರಂತೆ ನಾವು ಕೊಟ್ಟಿದ್ದೇವೆ. ಅದನ್ನು ಪರಾಂಬರಿಸಿ ತಾವು ಏನು ತಮ್ಮ

ರೂಲಿಂಗನ್ನು ಕೊಡುತ್ತೀರೋ ಕೊಡಿ. ಆದರೆ ಇಲ್ಲಿಯೂ ಸಹಾ ಯಾವ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಮಾಡಿದಂಥ ಸ್ಟೇಟ್‌ಮೆಂಟ್‌ನ್ನು, ದಾಖಲೆಗಳನ್ನು ತಮಗೆ ಒದಗಿಸಿಕೊಟ್ಟಾಗ ತಾವು ಅದನ್ನು ನೋಡಿ. ತಾವು ಕನ್‌ವಿನ್ಸ್ ಆಗಿದ್ದರೆ ಮತ್ತೆ ನಾವು ಯಾವುದೇ ದಾಖಲೆಗಳನ್ನು ಒದಗಿಸಿಕೊಡುವಂಥ ಅಗತ್ಯವಿಲ್ಲ. ಆ ದಾಖಲೆಗಳು ಸಾಲದು ಎಂದು ತಮಗೆ ಅನಿಸಿದಾಗ ಮಾತ್ರ ಬೇರೆ ದಾಖಲೆಗಳನ್ನು ಕೊಡುವಂಥ ಸಂದರ್ಭ ಇಲ್ಲಿ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟ್ ಇದೆ, ಆ ದಾಖಲೆಗಳನ್ನು ತಮಗೆ ಒದಗಿಸಿಕೊಟ್ಟಿದ್ದೇವೆ. ಬಹುಶಃ ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡುವುದಕ್ಕೆ ಇದಕ್ಕಿಂತ ಹೆಚ್ಚಿನ ದಾಖಲೆಗಳು ಅಗತ್ಯ ಇಲ್ಲ ಈ ಸಂದರ್ಭದಲ್ಲಿ. ಅದಕ್ಕೋಸ್ಕರ ತಾವು ಅನುಮತಿಯನ್ನು ಕೊಟ್ಟು ಚರ್ಚೆಗೆ ಅವಕಾಶವನ್ನು ಮಾಡಿಕೊಡಿ..

ಶ್ರೀ ಹೆಚ್. ವಿಶ್ವನಾಥಯ್ಯ : ಸನ್ಮಾನ್ಯ ಅಧ್ಯಕ್ಷರೇ, ಈಗ..

ಅಧ್ಯಕ್ಷರು : ಮುಂದುವರಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಪ್ರಶ್ನೆಯನ್ನು ತಾವು ಕೇಳಿದ್ದೀರಿ. ದಾಖಲಾತಿಗಳು ಇದಕ್ಕಿಂತ ಹೆಚ್ಚು ಅವಶ್ಯಕತೆ ಇದೆ ಎಂದು ಕಂಡರೆ ನಾನು ಅದನ್ನು ಯಾವಾಗಲಾದರೂ ಮಾಡಬಹುದು. ಈಗ ನನಗೆ ಬೇಕಾಗಿರತಕ್ಕಂಥ ದಾಖಲಾತಿ ಸದನದಲ್ಲಿ ನಾವು ಆಡಿರತಕ್ಕಂಥ ಮಾತು. ನಾನು ಒಂದು ವೇಳೆ ಈ ವಿಚಾರವನ್ನು ಪ್ರಸ್ತಾಪ ಮಾಡದಿದ್ದರೆ ನಾನು ಮಾನ್ಯ ಮಂತ್ರಿಗಳಾದ ಶಿವಕುಮಾರ್‌ರವರ ವಿರುದ್ಧ ಚಾರಿತ್ರ್ಯ ಹರಣ ಮಾಡಿದಂಥ ಆಪಾದನೆಗೆ ಗುರಿಯಾಗಬೇಕಾಗುತ್ತದೆ, ನಿಂದನೆಗೆ ಗುರಿಯಾಗಬೇಕಾಗುತ್ತದೆ. ಅದು ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಅದಕ್ಕಾಗಿ ಈ ವಿಚಾರ ಹಕ್ಕುಬಾಧ್ಯತಾ ಸಮಿತಿಗೆ ತಾವು ನೇರವಾಗಿ ಹಾಕಿದರೆ ಅದು ಆಗಬಹುದು. ಅದಲ್ಲದೇ ಇದು - ಹಕ್ಕುಬಾಧ್ಯತಾ ಸಮಿತಿಗೆ ಹೋಗುವುದೇ ಎಷ್ಟರ ಮಟ್ಟಿಗೆ ಯೋಗ್ಯವಾಗಿದೆ ಎನ್ನತಕ್ಕಂಥದ್ದನ್ನು ಹೇಳುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ಆ ದಿವಸ ಕೋರ್ಟ್‌ನ ದಾಖಲೆಗಳನ್ನು ಇಲ್ಲಿ ಹೇಳಿದ್ದೇನೆ. ಆ ದಾಖಲಾತಿಗಳ ಆಧಾರದ ಮೇಲೆ ಅವರ ವಿರುದ್ಧ ಛಾರ್ಜ್ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದು ಅಷ್ಟೇ ಅಲ್ಲ, ನಾನು ಹಲವಾರು ದಾಖಲೆಗಳನ್ನು ಪ್ರಸ್ತಾಪ ಮಾಡುವುದಕ್ಕೆ ನನಗೆ ಆ ಸಮಯದಲ್ಲಿ ತಾವು ಅಪ್ಪಣೆಯನ್ನು ಕೊಡಿರಿ. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಿರುವಾಗ ಕ್ವಶ್ಚನ್ ಆಫ್ ಐಡೆಂಟಿಟಿ ಬಂತು. Identity of persons...

SRI. M. VEERAPPA MOILY : Sir, Whether consent has been given?

MR. SPEAKER : No.

SRI M. VEERAPPA MOILY : Then, how can he go on merits?

SRI. D.B. CHANDRE GOWDA : I have got umpteen number of documents.

ಅಧ್ಯಕ್ಷರು : ನಿಮ್ಮ ಡಾಕ್ಯುಮೆಂಟ್ಸ್‌ನ್ನೆಲ್ಲಾ ನನಗೆ ಕೊಡಿ. ನಾನು ಅದನ್ನು ನೋಡುತ್ತೇನೆ. umpteen number of documents ಎಂದ್ರಲ್ಲಾ ಅದರಲ್ಲಿ ಕೆಲವನ್ನಾದರೂ ಕೊಡಿ. ನಾನು ನೋಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಎಲ್ಲವನ್ನೂ ಕೊಡುತ್ತೇನೆ. ದಾಖಲೆ ಯಾವುದು? ಸದನದ ದಾಖಲೆ ಮತ್ತು ಕೋರ್ಟಿನ ದಾಖಲೆ ಅದು ಬಿಟ್ಟರೆ ಬೇರೆ....

ಅಧ್ಯಕ್ಷರು : ಕೋರ್ಟಿನ ದಾಖಲೆಯನ್ನು ನನಗೆ ದಯವಿಟ್ಟು ಕಳುಹಿಸಿ ಕೊಡಿ.

SRI. M. VEERAPPA MOILY: Even those court documents and all other necesary documents should have been produced.

ಶ್ರೀ ಹೆಚ್. ವಿಕಾಂತಯ್ಯ: ತಮ್ಮ ಅವಗಾಹನೆಗೆ ಅದು ಅವಶ್ಯಕವಾದರೆ ಅದನ್ನು ನಾವು ನಿಮ್ಮ ಮುಂದೆ ಇಡುತ್ತೇವೆ. ಆ ಪ್ರಶ್ನೆ ಅಲ್ಲ.

ಅಧ್ಯಕ್ಷರು : ನನಗೆ ಅವಶ್ಯಕವಾಗಿ ಬೇಕಾಗಿದೆ.

ಶ್ರೀ ಹೆಚ್. ವಿಕಾಂತಯ್ಯ: ಇಲ್ಲಿ ಏನು ಇದೆ ಎಂದರೆ ನಾವು ಯಾವ ಕಾಗದ ಅಥವಾ ದಾಸ್ತಾವೇಜಿನ ಆಧಾರದ ಮೇಲೆ ಈ ಪ್ರಶ್ನೆಯನ್ನು ಎತ್ತುತ್ತೇವೆ, ಆ ದಾಖಲೆ ಇದ್ದರೆ ಸಾಕು ಮಾನ್ಯ ಅಧ್ಯಕ್ಷರೇ,

ನಾವು ಇವತ್ತಿನ ದಿವಸ ಮುಖ್ಯಮಂತ್ರಿಗಳ ಮೇಲೆ ಹಕ್ಕುಬಾಧ್ಯತೆ ಚ್ಯುತಿ ಪ್ರಶ್ನೆ ಎತ್ತಿರುವುದು, ಅವರು ಈ ಸಭೆಯಲ್ಲಿ ನೀಡಿದ ಹೇಳಿಕೆಯ ಆಧಾರದ ಮೇಲೆ ಹೇಳಿಕೆ ಪ್ರತಿಯನ್ನು ನಡವಳಿಕೆಯ ಪ್ರತಿಯನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಇನ್ನು ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆ. ಅಲ್ಲಿ ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ಡಾಕ್ಯುಮೆಂಟ್ ಬೇಕೋ

"If the question raised is based on a document, the notice shall be accompanied by the document."

ಅದನ್ನು ನಾವು ಕೊಟ್ಟಿದ್ದೇವೆ. ಇದೇ ದಾಖಲೆಗಳನ್ನು ಕೊಡುವಂತಹ ವಿಚಾರ ಅಥವಾ ಪರಿಶೀಲನೆ ಮಾಡುವ ವಿಚಾರಕ್ಕೆ ತಾವು ಅನುಮತಿ ಕೊಟ್ಟು, ಇದು ಕ್ರಮವಾಗಿದೆ ಎಂದು ಹೇಳಿದ ಮೇಲೆ ನಾವು ಎಲ್ಲ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಬಹುದು. ಇಲ್ಲವೇ ಹಕ್ಕು ಬಾಧ್ಯತಾ ಸಮಿತಿ ಏನಿದೆ, ಆ ಸಮಿತಿಯ ಮುಂದೆ ಸಹ ನಮಗೆ ಸಂಬಂಧಪಟ್ಟ ದಾಖಲೆಗಳನ್ನು ಕೊಡುವುದಕ್ಕೆ ನಮಗೆ ಅವಕಾಶವಿದೆ.

MR. SPEAKER : I am suomot satisfied.

ನಿಮ್ಮ ಡಾಕ್ಯುಮೆಂಟ್ಸ್ ಆಧಾರದ ಮೇಲೆ ಹಕ್ಕುಚ್ಯುತಿ ಆಗಿದೆ ಎಂದು ಹೇಳಿ ನಾನು ಸ್ಟೇಟ್‌ಅವೇ I can refer it to the Privileges Committee. ಆದುದರಿಂದ ನಿಮ್ಮಲ್ಲಿರತಕ್ಕ ಡಾಕ್ಯುಮೆಂಟ್ಸ್ ಅನ್ನು ನನಗೆ ಕಳುಹಿಸಿಕೊಟ್ಟರೆ ಅದನ್ನು ನೋಡಿ ಅದರ ಆಧಾರದ ಮೇಲೆ ನಾನು ಸದನಕ್ಕೆ ಬಿಡುತ್ತೇನೆ. ಇಲ್ಲದಿದ್ದರೆ ನಾನೇ ಅದರ ಬಗ್ಗೆ ಆಕ್ಟ್ ಮಾಡುತ್ತೇನೆ.

ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ

ಕೆ.ಎಸ್.ಟಿ.ಡಿ.ಸಿ. ಯವರು ಇಂಟರ್‌ನ್ಯಾಷನಲ್ ಗಾಲ್ಫ್ ಗ್ರೌಂಡ್ ಮಾಡುವ ಬಗ್ಗೆ.

(ನಿರಾಕರಿಸಲಾಯಿತು)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಉಪಾಧ್ಯಕ್ಷಣಿಯವರು ನನ್ನ ಹೆಸರನ್ನು ಕರೆದು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಟ್ಟಂತಹ ಸಂದರ್ಭದಲ್ಲಿ